■ ವಿಶಾಖ ಎನ್.

# ಕಂಗನಾ ಕಂಗಾಲು



‘ಕೆಸನೊವಾ’ (ಸ್ತ್ರೀ ಲೋಲ) ಹಾಗೂ ಅವನ ಪತ್ನಿ ತಮ್ಮ ಬೆನ್ನಹಿಂದೆ ಬಿದ್ದಿರುವ ಗುಮಾನಿ ಇದೆ ಎಂದು ಕಂಗನಾ ರನೋಟ್ ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

‘ದೂರದಿಂದಲೇ ಕ್ಲಿಕ್ಕಿಸಬಲ್ಲ ಲೆನ್ಸ್‌ಗಳನ್ನು ಹೊಂದಿದ ಕ್ಯಾಮೆರಾಗಳನ್ನು ಹಿಡಿದು ಫೋಟೊಗ್ರಾಫರ್‌ಗಳು ತಮ್ಮನ್ನು ಹಿಂಬಾಲಿಸುತ್ತಿದ್ದಾರೆ. ಇದು ಯಾಕಾಗಿಯೊ? ಎನ್ನುವುದು ಅವರ ಅನುಮಾನ ಮತ್ತು ಪ್ರಶ್ನೆ.

‘ಬೆಳಿಗ್ಗೆ 6:30ಕ್ಕೆ ತಮ್ಮ ಫೋಟೊ ತೆಗೆದರು. ಡಾನ್ಸ್ ಸ್ಟುಡಿಯೊಗೆ ತಾಲೀಮಿಗೆಂದು ಹೋದರೆ, ಅಲ್ಲೂ ಕ್ಯಾಮೆರಾ ಹಿಂಬಾಲಿಸಿತು. ಅಲ್ಲಿ ಯಾವ ಫೋಟೊಗ್ರಾಫರ್‌ಗೂ ತಮ್ಮ ಫೋಟೊ ತೆಗೆಯಲು ಅನುಮತಿ ಕೊಟ್ಟಿರಲಿಲ್ಲ. ಆದರೂ ಹೀಗಾಗುತ್ತಿರುವುದು ಸಂಶಯಾಸ್ಪದ’ ಎನ್ನುವುದು ಅವರ ಬೇಸರ.

ಕಂಗನಾ ಅನುಮಾನ ಇವಿಷ್ಟೇ ಅಲ್ಲ. ತಮ್ಮ ವಾಟ್ಸಾಪ್ ಚಾಟ್‌ಗಳೂ ಸೋರಿಕೆಯಾಗುತ್ತಿದ್ದು, ಅವನ್ನು ಯಾವುದಕ್ಕೆಲ್ಲ ಉಪಯೋಗಿಸುತ್ತಿರುವರೊ ಎನ್ನುವ ಇನ್ನೊಂದು ಪ್ರಶ್ನೆಯೂ ಅವರಿಗೆ ಇದೆ.

ತಮ್ಮ ನಿತ್ಯ ಬದುಕಿನ ಅಷ್ಟೂ ಕ್ಷಣಗಳನ್ನು, ವ್ಯವಹಾರ ಇತ್ಯಾದಿಯನ್ನು ಹೀಗೆ ಇಂಚಿಂಚಾಗಿ ಹಿಂಬಾಲಿಸಿ ಇಣುಕುತ್ತಿರುವ ವ್ಯಕ್ತಿ ಒಬ್ಬ ಸಿನಿಮಾ ನಾಯಕ. ಅವನಿಗೆ ಪತ್ನಿಯೇ ಕುಮ್ಮಕ್ಕು ಕೊಡುತ್ತಿದ್ದಾಳೆ. ಅವಳು ತಮ್ಮನ್ನು ನೋಡಿ ಕೆಲವು ಸಂಗತಿಗಳನ್ನು ಅಳವಡಿಸಿಕೊಳ್ಳಲು ಹವಣಿಸುತ್ತಿರಬಹುದು ಎನ್ನುವುದು ಕಂಗನಾ ಇನ್ನೊಂದು ಪೋಸ್ಟ್‌ನಲ್ಲಿ ಇರುವ ಆರೋಪ.

ಕೆಲವು ಸಿನಿಮಾ ವೆಬ್‌ಸೈಟ್‌ಗಳು ರಣಬೀರ್ ಕಪೂರ್ ಹಾಗೂ ಆಲಿಯಾ ದಂಪತಿಯ ಕಡೆಗೆ ಕಂಗನಾ ಬೆರಳು ತೋರುತ್ತಿದ್ದಾರೆ ಎಂದು ವರದಿ ಮಾಡಿವೆ. ಕಂಗನಾ ಮಾತ್ರ ನೇರವಾಗಿ ಯಾರ ಹೆಸರನ್ನೂ ತೆಗೆದುಕೊಂಡಿಲ್ಲ. ‘ಎಮರ್ಜೆನ್ಸಿ’ ಎಂಬ ಹಿಂದಿ ಸಿನಿಮಾವನ್ನು ಅವರು ನಿರ್ಮಿಸಿ, ನಿರ್ದೇಶಿಸಿದ್ದು, ಅದರಲ್ಲಿ ಇಂದಿರಾ ಗಾಂಧಿ ಪಾತ್ರದಲ್ಲಿ ಅವರು ನಟಿಸಿದ್ದಾರೆ. ಸಿನಿಮಾ ತೆರೆಕಾಣಬೇಕಿದೆ.

■

# ಅಲ್ಲು ಮಗನ ಪುಷ್ಪಾ ಟ್ರಕ್





ಅಲ್ಲು ಅರ್ಜುನ್ ಅಭಿನಯದ ‘ಪುಷ್ಪಾ’ ಸಿನಿಮಾ ತೆರೆಕಂಡಿದ್ದು 2021ರಲ್ಲಿ. ಇನ್ನೂ ಅದರ ಹ್ಯಾಂಗ್‌ಓವರ್ ಇದ್ದೇಇದೆ. ಅದರ ಎರಡನೇ ಭಾಗದ ಚಿತ್ರಕಥೆಯನ್ನು ನಿರ್ದೇಶಕ ಸುಕುಮಾರ್ ತಿದ್ದಿ ತೀಡಿ ಒಂದು ಹಂತಕ್ಕೆ ತಂದಿದ್ದಾಗಿದೆ. ಚಿತ್ರೀಕರಣಪೂರ್ವ ಕೆಲಸಗಳು ಎರಡು ವಾರಗಳಿಂದ ಚುರುಕುಗೊಂಡಿದ್ದು, ಮೊದಲ ಭಾಗದ ಗೆಲುವಿನ ಅಲೆಯ ಮೇಲೆ ಇಡೀ ಚಿತ್ರತಂಡ ಈಗಲೂ ತೇಲುತ್ತಿರುವುದು ಸ್ಪಷ್ಟ.

ಕೋವಿಡ್ ಕಾರಣದಿಂದಾಗಿ ‘ಪುಷ್ಪಾ’ ಮೊದಲ ಭಾಗದ ಚಿತ್ರೀಕರಣದಲ್ಲಿ ಕೊಂಚ ರಾಜಿ ಮಾಡಿಕೊಳ್ಳಬೇಕಾಗಿ ಬಂದಿತ್ತು. ಕಾಡಿನ ಭಾಗದ ಚಿತ್ರೀಕರಣ ಇನ್ನಷ್ಟು ನಡೆಯಬೇಕಾಗಿತ್ತು. ಆದರೆ, ಸೋಂಕು ವ್ಯಾಪಕಗೊಂಡಿದ್ದರಿಂದಾಗಿ ಅಂದುಕೊಂಡಂತೆ ಚಿತ್ರೀಕರಣ ನಡೆಸಲು ಸಾಧ್ಯವಾಗಿರಲಿಲ್ಲ. ಆದರೂ ಚಿತ್ರೀಕರಿಸಿದ್ದ ಭಾಗಗಳನ್ನೇ ಜನಪ್ರಿಯ ಧಾಟಿಗೆ ಒಗ್ಗಿಸಿ, ಚಿತ್ರವನ್ನು ನಿರ್ದೇಶಕರು ಗೆಲುವಿನ ಹಳಿ ಮೇಲೆ ತಂದು ನಿಲ್ಲಿಸಿದ್ದರು. ನಿರ್ದೇಶಕ ರಾಜಮೌಳಿ ಕೂಡ ಸುಕುಮಾರ್ ಸೃಷ್ಟಿಸುವ ಕಾಲ್ಪನಿಕ ಜಗತ್ತು ಕುತೂಹಲಕಾರಿ ಎಂದು ಹೊಗಳಿದ್ದರು. ‘ಪುಷ್ಪಾ’ ಎರಡನೆಯ ಭಾಗ ಹೇಗಿದ್ದಿರಬಹುದು ಎನ್ನುವ ಕುತೂಹಲ ತಮಗೂ ಇದೆ ಎಂದಿದ್ದರು.

ಅಲ್ಲು ಅರ್ಜುನ್ ತಮ್ಮ ಸಿನಿಮಾದ ಚಿತ್ರೀಕರಣ ಮೊಟಕಾಗಿದ್ದ ಕೋವಿಡ್ ಕಾಲದ ಸನ್ನಿವೇಶವನ್ನು ನೆನಪಿಸಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಅವರು ಮನೆಯಲ್ಲೇ ಹೆಚ್ಚು ಹೊತ್ತು ಕಳೆದಿದ್ದರಿಂದ ಮಕ್ಕಳ ಜತೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಯಿತಂತೆ. ಅವರ ಮಗ ಅಯಾನ್ ಅರ್ಜುನ್ ಕೂಡ ಅಪ್ಪನ ಸಿನಿಮಾ ಕುರಿತು ಕುತೂಹಲ ತಳೆದಿದ್ದ. ಸಿನಿಮಾ ತೆರೆಕಂಡು ವರ್ಷಕ್ಕೂ ಹೆಚ್ಚು ಕಾಲವಾಗಿದೆ. ಈಗಲೂ ಅವನು ಅದರ ಅಭಿಮಾನಿ.

ಇತ್ತೀಚೆಗೆ ಅಯಾನ್ ತಂದೆಗೆ ಒಂದು ಅಚ್ಚರಿಯ ಉಡುಗೊರೆ ನೀಡಿದ. ಅದು ಒಂದು ಆಟಿಕೆ ಟ್ರಕ್. ‘ಪುಷ್ಪಾ’ ಸಿನಿಮಾದಲ್ಲಿ ಬಳಕೆಯಾಗುತ್ತಲ್ಲ; ಅದನ್ನು ನೆನಪಿಸುವಂಥದ್ದು. ಅದನ್ನು ನೋಡಿದ್ದೇ ಅಲ್ಲು ಅರ್ಜುನ್‌ಗೆ ಖುಷಿಯೋ ಖುಷಿ. ಆಟಿಕೆ ಟ್ರಕ್‌ನ ಮೇಲೆ ‘ಪುಷ್ಪಾ’ ಎಂಬ ಒಕ್ಕಣೆಯನ್ನೂ ಅಯಾನ್ ಬರೆದಿದ್ದ.

■